ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸ್ವಚ್ಛ ಸಂಕೀರ್ಣ | ಜಲೋತ್ಸವ – ಮನೆ ಮನೆಗೆ ಗಂಗೆ | ಮನೆ ಮನೆಗೆ ಗಂಗೆ ಜಲ ಜೀವನ ಮಿಷನ್

# ಜಲ ಜೀವನ ಮಿಷನ್ ಯೋಜನೆಯಲ್ಲಿ ನೀರಿನ ಮೀಟರ್ ಅಳವಡಿಕೆಯ ಪರಿಣಾಮ





ಭೂಮಿಯ ಮೇಲಿನ ಜೀವಿಗಳು ಬದುಕಲು ನೀರು ಬಹುಮುಖ್ಯವಾಗಿದೆ. ನೀರು ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದೆ. ನೀರನ್ನು ಜೀವಾಮೃತ ಎಂದು ಸಹ ಕರೆಯುತ್ತಾರೆ. ನಮ್ಮ ದಿನನಿತ್ಯದ ಕಾರ್ಯಚಟುವಟಿಕೆಗೆ ನೀರು ಅತ್ಯಗತ್ಯವಾಗಿದೆ. ನಮ್ಮ ಭೂಮಿಯ ಬಹುಪಾಲು ನೀರಿನಿಂದ ಆವೃತವಾಗಿದ್ದರೂ ಈ ಎಲ್ಲಾ ನೀರು ಬಳಕೆಗೆ ಸುರಕ್ಷಿತವಲ್ಲ, ನಮ್ಮ ದೇಶದಲ್ಲಿ ನೀರಿನ ಸಮಸ್ಯೆ ದೊಡ್ಡ ಮಟ್ಟದಲ್ಲಿ ಕಾಡುತ್ತಿದ್ದು; ಇಂದಿನ ಅವಶ್ಯಕತೆಗೆ ಮತ್ತು ನಾಳೆಯ ಭವಿಷ್ಯತ್ತಿಗೆ ನೀರನ್ನು ಸಂರಕ್ಷಿಸುವುದು ಬಹುಮುಖ್ಯವಾಗಿದೆ.

ಮಾನವನ ದೈನಂದಿನ ಚಟುವಟಿಕೆ ನೀರಿಲ್ಲದೆ ನಡೆಯುವುದು ಅಸಾಧ್ಯ, ಹಾಗೆ ಭಾರತವು ಕೃಷಿ ಪ್ರಧಾನ ದೇಶವಾಗಿದ್ದು ಕೃಷಿಗೆ ನೀರು ಮುಖ್ಯವಾಗಿದೆ. ಇದಲ್ಲದೆ, ಕೈಗಾರಿಕೆಗಳು ವಿವಿಧ ಉದ್ದೇಶಗಳಿಗಾಗಿ ನೀರನ್ನು ಬಳಸಲಾಗುತ್ತದೆ. ಉದಾಹರಣೆಗೆ, ಥರ್ಮಲ್ ಪವರ್ ಪ್ಲಾಂಟ್‌ಗಳು ಚಾಲನೆಗೆ ಸಾಕಷ್ಟು ಪ್ರಮಾಣದ ನೀರನ್ನು ಬಳಕೆಯಾಗುತ್ತದೆ. ಇಡೀ ಜೀವಸಂಕುಲವೆ ನೀರಿನ ಮೇಲೆ ಅವಲಂಬಿತವಾಗಿದೆ..

**ಜಲ ಜೀವನ್ ಮಿಷನ್ ಯೋಜನೆ:**

ಗ್ರಾಮೀಣ ಜನರಿಗೆ ಶುದ್ಧ ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ನಿಟ್ಟಿನಲ್ಲಿ ಪ್ರತಿ ಮನೆಗೂ ಕಾರ್ಯಾತ್ಮಕ ಗೃಹ ನಳ ಸಂಪರ್ಕ ಕಲ್ಪಿಸುವ ಉದ್ದೇಶದೊಂದಿಗೆ ಸರ್ಕಾರವು ಜಲ ಜೀವನ್ ಮಿಷನ್ ಯೋಜನೆಯನ್ನು ಜಾರಿಗೆ ತಂದಿದೆ. ಈ ಮೂಲಕ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಅನುಷ್ಠಾನ ಮಾಡಲಾಗುತ್ತಿದೆ.



ಜಲ ಜೀವನ ಮಿಷನ್ ಯೋಜನೆಯಲ್ಲಿ ಮನೆ-ಮನೆಗೆ ಕಾರ್ಯಾತ್ಮಕ ನಳದ ಮೂಲಕ ನೀರು ಕೊಡಲಾಗುತ್ತಿದೆ. ಇದರಿಂದ ನೀರಿಗೆ ಪರಿಪಾಡಲು ಪಡುತ್ತಿದ್ದ ಜನರ ಸಂಕಷ್ಟ ತಪ್ಪಿದೆ. ಗ್ರಾಮೀಣರ ಬದುಕಲ್ಲಿ ಸಂತಸ ಮೂಡಿದೆ.

ಇನ್ನು ನೀರಿನ ಮಿತ ಬಳಕೆ ಮತ್ತು ಪ್ರತಿ ಮನೆಗೆ ಪ್ರತಿ ಮಾಹೆಯಲ್ಲಿ ನಳಗಳ ಮೂಲಕ ಹರಿಯುವ ನೀರಿನ ಪ್ರಮಾಣ ಎಷ್ಟು ಎಂಬುದರ ಬಗ್ಗೆ ಮಾಪನ ಮಾಡುವ ಉದ್ದೇಶದೊಂದಿಗೆ ಕರ್ನಾಟಕ ಸರ್ಕಾರವು ಜೆ.ಜೆ.ಎಂ ಯೋಜನೆಯಡಿ ಮನೆಮನೆಗೆ ನಳ ಸಂಪರ್ಕಕ್ಕೆ ಮೀಟರ್ ಅಳವಡಿಸಲು ಮುಂದಾಗಿದೆ.

ನೀರಿನ ಮೀಟರ್ ಗ್ರಾಮೀಣ ಭಾಗದ ಜನರು ತಮ್ಮ ದಿನನಿತ್ಯದ ಜೀವನದಲ್ಲಿ ಉಪಯೋಗಿಸುವ ನೀರಿನ ಪ್ರಮಾಣವನ್ನು ಅಳತೆ ಮಾಡುವ ಯಂತ್ರವಾಗಿದೆ. ನೀರಿನ ಮೀಟರ್ ಅನ್ನು ಕಾರ್ಯಾತ್ಮಕ ನಳ ಸಂಪರ್ಕ ಹೊಂದಿರುವವರ ಮನೆಯಲ್ಲಿ ಅಳವಡಿಸಲಾಗುತ್ತದೆ. ಸ್ಥಳೀಯ ಆಡಳಿತ (ಗ್ರಾಮ ಪಂಚಾಯತ್ ) ನೀರಿನ ಬಳಕೆ ಪ್ರಮಾಣ ಬಳಕೆಯನ್ನು ಲೆಡ್ಜರ್ ನಲ್ಲಿ ದಾಖಲಿಸಿ, ಮಾಸಿಕ ಶುಲ್ಕವನ್ನು ವಿಧಿಸುವುದರ ಮೂಲಕ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ.



ಮೀಟರ್ ಅಳವಡಿಸುವ ಪ್ರಮುಖ ಉದ್ದೇಶ ಪ್ರತಿ ಮನೆಗೆ ಸರಬರಾಜು ಆಗುವ ನೀರಿನ ಮಾಪನ ಮಾಡುವುದು ಹಾಗೂ ಜನರಲ್ಲಿ ನೀರಿನ ಮಿತ ಬಳಕೆ ಅಂದರೆ ಅಗತ್ಯವಿರುವಷ್ಟು ಮಾತ್ರ ಬಳಸುವ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ನೀರಿನ ಸಂರಕ್ಷತೆ ಮಾಡುವುದಾಗಿದೆ.

ಕಾರ್ಯಾತ್ಮಕ ಗೃಹ ನಳ ಸಂಪರ್ಕಕ್ಕೆ ಮೀಟರ್ ಅಳವಡಿಕೆ ಆಗಿರುವುದರಿಂದ ನೀರನ್ನು ಮಿತಬಳಕೆ ಮಾಡಬೇಕು ಎನ್ನುವ ಭಾವನೆ ಜನರಲ್ಲಿ ಬಂದಿದೆ. ನೀರು ಪೋಲು ಮಾಡಬಾರದು ಎಂಬ ಕಾರಣಕ್ಕೆ ಮೀಟರ್ ಅಳವಡಿಕೆ ಮಾಡಲಾಗಿದೆ. ಅಲ್ಲದೇ ಜೆಜೆಎಂ ಯೋಜನೆಯಲ್ಲಿ ಪ್ರತಿ ವ್ಯಕ್ತಿಗೆ ಕನಿಷ್ಠ ೫೫ ಲೀಟರ್ ನೀರು ಕೊಡಬೇಕಾಗಿದೆ ಅದರ ಅಳತೆ ಮಾಪನಕ್ಕೆ ಮೀಟರ್ ಸಹಕಾರಿಯಾಗಿದೆ.

ಪ್ರತಿಯೊಬ್ಬರಿಗೂ ಕನಿಷ್ಠ ೫೫ ಲೀಟರ್ ನೀರು ಸಿಗುತ್ತದೆ ಇಲ್ಲವೋ ಎಂದು ಖಾತ್ರಿಪಡಿಸಿಕೊಳ್ಳಲು ಇದು ಅನುಕೂಲಕಾರಿಯಾಗಿದೆ. ಈ ಮೀಟರ್ ಅಳವಡಿಕೆಯಿಂದ ನಾವು ಅಗತ್ಯಕ್ಕೆ ತಕ್ಕಷ್ಟು ಮಾತ್ರ ನೀರು ಬಳಸಬೇಕು ಎನ್ನುವ ಜವಾಬ್ದಾರಿ ಜನರಲ್ಲಿ ಮೂಡಿಸಲು ಅನುಕೂಲಕಾರಿಯಾಗಿದೆ.

**ಜೆ.ಜೆ.ಎಂ ಅಡಿಯಲ್ಲಿ ಕಾರ್ಯಾತ್ಮಕ ನಳ ಸಂಪರ್ಕಕ್ಕೆ ನೀರಿನ ಮೀಟರ್ ಅಳವಡಿಕೆಯ ಉಪಯೋಗಗಳು**

- ಕಾರ್ಯಾತ್ಮಕ ನಳ ಸಂಪರ್ಕದ ಮೂಲಕ ಹರಿಯುವ ನೀರಿನ ಪ್ರತಿ ಹನಿಯ ಲೆಕ್ಕ ಇಡುವಿಕೆ.
- ಪ್ರತಿ ವ್ಯಕ್ತಿಯು ನೀರಿನ ಬಳಕೆಗೆ ಜವಾಬ್ದಾರಿ ಹೊಂದಿರುತ್ತಾರೆ.
- ಪ್ರತಿ ಮನೆಯಲ್ಲಿ ಬಳಕೆ ಮಾಡುವ ನೀರಿನ ಪ್ರಮಾಣವನ್ನು ನೀರಿನ ಮೀಟರ್ ಮೂಲಕ ಅಳೆಯಲಾಗುತ್ತದೆ.
- ನೀರಿನ ಮೀಟರ್, ನೀರನ್ನು ಪೋಲು ಮಾಡದಂತೆ ವ್ಯಕ್ತಿಯ ವರ್ತನೆಯಲ್ಲಿ ಬದಲಾವಣೆ ತರುತ್ತದೆ .
- ಅನವಶ್ಯಕವಾಗಿ ನೀರನ್ನು ವ್ಯರ್ಥ ಮಾಡದಂತೆ ತಡೆಯಲು ನೀರಿನ ಮೀಟರ್ ಸಹಕಾರಿಯಾಗಿದೆ.
- ಲೆಡ್ಜರ್ ನಲ್ಲಿ ನೀರಿನ ಬಳಕೆಯನ್ನು ನಮೂದಿಸಲು ಗ್ರಾಮ ಪಂಚಾಯಿತಿಗೆ ನೀರಿನ ಮೀಟರ್ ಸಹಾಯ ಮಾಡುತ್ತದೆ.
- ಪ್ರತಿ ತಿಂಗಳು ನೀರು ಬಳಕೆಗೆ ಶುಲ್ಕ ವಿಧಿಸಲು ನೀರಿನ ಮೀಟರ್ ಅವಶ್ಯವಾಗಿದೆ.
- ನೀರಿನ ಮೀಟರ್ ಮಾಸಿಕ ಶುಲ್ಕ ವಿಧಿಸಲು ಸಹಕಾರಿಯಾಗಿದೆ ಮತ್ತು ಈ ಮೂಲಕ ಗ್ರಾಮ ಪಂಚಾಯಿತಿಯ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಉಪಯೋಗಕರ.
- ಮೀಟರ್ ಬಳಕೆಯು ಸ್ವಂತ ಸಂಪನ್ಮೂಲ ಕ್ರೋಢೀಕರಣಕ್ಕೆ ಸಹಕಾರಿಯಾಗಿದೆ.
- ಬಳಕೆದಾರರ ಶುಲ್ಕವನ್ನು ಸಂಗ್ರಹಿಸುವ ಮೂಲಕ ಹಳ್ಳಿಯ ಮೂಲಸೌಕರ್ಯ ವ್ಯವಸ್ಥೆಯಲ್ಲಿ ಸುಸ್ಥಿರ ನೀರು ಸರಬರಾಜು ವ್ಯವಸ್ಥೆಯನ್ನು ನಿರ್ವಹಿಸಲು ನೀರಿನ ಮೀಟರ್ ಉಪಯೋಗಕಾರಿ.




**ನೀರು ಬರಿದಾಗುವ ಸಂಪನ್ಮೂಲ. ನೀರನ್ನು ಎಚ್ಚರಿಕೆಯಿಂದ ಬಳಸಿ ನೀರನ್ನು ಪೋಲಾಗದಂತೆ ತಡೆಯೋಣ. ಭವಿಷ್ಯಕ್ಕಾಗಿ ನೀರನ್ನು ಉಳಿಸೋಣ.**

**ನೀರು - ನೈರ್ಮಲ್ಯ ಕುರಿತ ಸಮಸ್ಯೆಗಳಿಗೆ ಪರಿಹಾರ ಸಹಾಯವಾಣಿ 9480985555 ಗೆ ಕರೆ ಮಾಡಿ**